ಗಗನಸಖಿ ನಗುಮುಖದಿಂದ ಕೊಟ್ಟ ತಿಂಡಿ ಹೊಟ್ಟೆಯನ್ನು ಇನ್ನೂ ನೆಮ್ಮದಿಯಾಗಿಟ್ಟಿತ್ತು. ಹಾಗಾಗಿ ಮುಖ ತೊಳೆದು ಫ್ರೆಶ್ ಆಗಿ ಒಂದೈದು ನಿಮಿಷ ಕುಳಿತಿದ್ದವನು ಎದ್ದು 909ನೇ ಸ್ಯೂಟ್ ಕಡೆ ನಡೆದಿದ್ದೆ. ಬಾಗಿಲು ತಟ್ಟಲೋ ಬೇಡವೋ ಎಂದು ತಟ್ಟಿದ್ದೆ. ಒಳಗಿನಿಂದ ಚಿಲಕ ಹಾಕಿಕೊಂಡಿರದ ಕಾರಣ ಸ್ವಲ್ಪವೇ ಸ್ವಲ್ಪ ತೆರೆದುಕೊಂಡಿತ್ತು. ಒಳಗೆ ಇಣುಕಿದಾಗ ಚೆರ್ಲಪಲ್ಲಿ ನರಸಿಂಹರೆಡ್ಡಿ ಹಾಸಿಗೆಯ ಮೇಲಿನ ದಿಂಬಿಗೆ ಒರಗಿ ದೊಡ್ಡ ಲ್ಯಾಪ್‌ಟಾಪ್ ಒಂದನ್ನು ಎದುರಿಗಿಟ್ಟುಕೊಂಡು, ಅದನ್ನು ನೋಡುವುದರಲ್ಲಿ ತಲ್ಲೀನರಾಗಿದ್ದರು. ನನ್ನನ್ನು ಗಮನಿಸಿ, “ಕಮ್ ಇನ್...” ಎಂದು ನಗು ಬೀರಿದ್ದರು. ನಾನು ಒಳಗೆ ಹೆಜ್ಜೆಯಿಡುತ್ತಿದ್ದಂತೆ, “ಮಿಸ್ಟರ್ ರಾಯಲಪಾಡು ರಾಘವಶರ್ಮ?...” ಎಂದಿದ್ದರು. “ಎಸ್ ಐಯ್ಯಾಮ್...” ಎಂದು ನಗುತ್ತಾ ಎದುರಿಗಿನ ಲೆದರ್ ಸೋಫಾದ ಮೇಲೆ ಕುಳಿತಿದ್ದೆ. ಲ್ಯಾಪ್‌ಟಾಪಿನ ಪರದೆಯ ಮೇಲೆ ತೆಲುಗಿನ ಹಳೆ ಸಿನಿಮಾ ಸುವರ್ಣ ಸುಂದರಿಯ, “ಪಿಲವಕುರಾ ಅಲಗಕುರಾ ನಲುಗುರಿಲೋ ನನು ಓ ರಾಜ...” ಎನ್ನುವ ಹಾಡಿನ ವಿಡಿಯೊ ಸುಮಧುರವಾಗಿ ಬಿತ್ತರವಾಗುತ್ತಿತ್ತು. “ನನಗೆ ಏನೂ ಬೇಕಿಲ್ಲ ಅನ್ನಿಸುತ್ತಿದೆ” ಎಂದು ಯಾರಿಗೋ ಹೇಳುವಂತೆ ಹೇಳುತ್ತಾ ಹಾಸಿಗೆಯ ಮೇಲೆ ಚಕ್ಕಲಬಕ್ಕಲ ಕೂತಿದ್ದರು.

“ಅರ್ಥ ಆಗಲಿಲ್ಲ ನನಗೆ...” ನಾನೆಂದೆ.

“ನಿಮಗೆ ಏನು, ಯಾರಿಗೂ, ಯಾರೂ, ಏನೂ ಅರ್ಥವಾಗುವುದಿಲ್ಲ. ಇವೊತ್ತು ಮಹಾಲಯ ಅಮಾವಾಸ್ಯೆ. ನಮ್ಮೂರು ಚೆರ್ಲಪಲ್ಲಿಯಲ್ಲಿ ನಮ್ಮಣ್ಣ ವೀರಾಂಜನೇಯರೆಡ್ಡಿ ಹಿರಿಯರಿಗೆ ಪೂಜೆ ಇಟ್ಟುಕೊಂಡಿದ್ದಾರೆ. ಮಾಂಸ, ಮದ್ಯದ ಜೊತೆ ಮಚ್ಚು, ಕೊಡಲಿ, ಬಂದೂಕು, ಪಿಸ್ತೂಲು ಮುಂತಾದುವುಗಳನ್ನು ಎಡೆ ಊಟದ ಜೊತೆ ಇಡುತ್ತಾರೆ. ರಾಜಮಹೇಂದ್ರಿಯಿಂದ ಅರವತ್ತು ಕಿಲೋಮೀಟರ್ ದೂರ. ನನ್ನ ತಾತ ಕಟ್ಟಿದ ಊರು. ಹಾಗಾಗಿ ಅದಕ್ಕೆ ತನ್ನ ಮೂಲ ಊರಿನ ಹೆಸರನ್ನೇ ಇಟ್ಟರಂತೆ. ಸೆಂಟ್ರಲ್ ಜೈಲಿರುವ ಚೆರ್ಲಪಲ್ಲಿಯೇ ನಮ್ಮ ಮೂಲ ಸ್ಥಳ. ಗುರುತಿಗಾಗಿ ಈಗಲೂ ಹೈದರಾಬಾದಿನ ಚೆರ್ಲಪಲ್ಲಿಯಲ್ಲಿ ಎರಡು ದೊಡ್ಡ ಮನೆಗಳಿವೆ. ಆದರೆ ಬಹಳ ಹಿಂದೆಯೇ ಅವನ್ನು ಸರ್ಕಾರಕ್ಕೆ ದಾನವಾಗಿ ಕೊಟ್ಟರಂತೆ. ಸರ್ಕಾರ ಅವುಗಳನ್ನು ಗೆಸ್ಟ್ ಹೌಸ್‌ಗಳನ್ನಾಗಿ ಮಾಡಿಕೊಂಡಿದೆ. ಈಗಲೂ ನಮಗಾಗಿ ಒಂದು ವಿಐಪಿ ರೂಮ್ ಇದೆ. ಆದರೆ ಅಲ್ಲಿ ಬಿಟ್ಟ ಮೇಲೆ ಆ ಕಡೆ ನಮ್ಮ ಕುಟುಂಬದ ಯಾವ ವ್ಯಕ್ತಿಯೂ ಮುಖ ಕೂಡ ಹಾಕಿಲ್ಲ. ಪ್ರತಿವರ್ಷ ಇನ್ನೂರು ಮರಿಗಳನ್ನು ಕೊಯ್ದು ಇಡೀ ತಾಲ್ಲೂಕಿಗೆ ಊಟ ಹಾಕುತ್ತೇವೆ. ಜೊತೆಗೆ ಕ್ವಿಂಟಾಲುಗಟ್ಟಲೆ ಮೀನು. ಕುಡಿಯೋದಕ್ಕೆ ನಮ್ಮ ಡಿಸ್ಟಲರಿಯಿಂದಲೇ ಒಂದು ಲೋಡ್ ಡ್ರಿಂಕ್ಸ್ ಬರುತ್ತೆ. ಕೆಲವರಿಗೆ ಸ್ವರ್ಗವೇ ಇಳಿದುಬಂದಂತಾಗುತ್ತದೆ. ಆದರೂ ನಮ್ಮನ್ನು ಫ್ಯೂಡಲ್ಸ್ ಎಂದು ಕರೆಯುತ್ತಾರೆ. ನಾನು ಯಾವ ವರ್ಷವೂ ಈ ಹಬ್ಬಕ್ಕೆ ತಪ್ಪಿಸಿಕೊಂಡವನಲ್ಲ. ಆ ಸಂಕಟವನ್ನು ಮರೆಯಲು ಹಳೆಯ ಹಾಡುಗಳನ್ನು ಆಲಿಸುತ್ತಿದ್ದೇನೆ. ಸುವರ್ಣ ಸುಂದರಿ ಸಿನಿಮಾನ ನಾನು ಮಿಡ್ಲಿಸ್ಕೂಲಿನಲ್ಲಿದ್ದಾಗ ನೋಡಿದ್ದು. ಸಿನಿಮಾದ ಹೀರೋಯಿನ್ ಅಂಜಲಿ ನನಗೆ ಆಗಲೇ ಕನಸಿನಲ್ಲಿ ಬರೋಳು. ಈಗಲೂ ಈ ಹಾಡು ಕೇಳುತ್ತಿದ್ದರೆ ಯಾವುದೋ ಸ್ವಪ್ನ ಲೋಕದಲ್ಲಿ ವಿಹರಿಸಿದಂತಾಗುತ್ತದೆ ನನಗೆ...” ಹೇಳುತ್ತಾ ಪಕ್ಕದಲ್ಲಿದ್ದ ಬೆಳ್ಳಿಯ ಲೋಟವನ್ನು ಬಾಯಿಗಿಟ್ಟುಕೊಂಡು ಏನನ್ನೊ ಒಂದು ಗುಕ್ಕು ಕುಡಿದು:

“ನಾನು ಹಗಲು ಹೊತ್ತಿನಲ್ಲಿ ಸಾಮಾನ್ಯವಾಗಿ ಮದ್ಯ ಸೇವಿಸುವುದಿಲ್ಲ. ಆದರೆ ಇವೊತ್ತು ತಡೆಯಲಾಗಲಿಲ್ಲ. ಇಷ್ಟೊತ್ತಿಗೆ ನಮ್ಮೂರಲ್ಲಿ ಮೂರು ಪಂಕ್ತಿಗಳು ಎದ್ದಿರುತ್ತವೆ. ಪ್ಯಾರಡೈಸ್‌ನಿಂದ ಬಿರಿಯಾನಿ ತರಿಸಲು ಹೇಳಿದ್ದೀನಿ. ನೀವೂ ಊಟ ಮಾಡಬಹುದು. ಪ್ಯಾರಡೈಸ್‌ನ ಒಂದು ಬಿರಿಯಾನಿನ ನಿಮ್ಮಂತಹ ಮೂರು ಜನ ತಿನ್ನಬಹುದು. ಐಸ್ ವೈನ್ ಇದೆ. ಅಮೃತ ಕುಡಿದಂಗೆ